# ರಂಪ

ಜಗತ್ತಿನ ಬಹುಪಾಲು ಸಮುದಾಯಗಳಲ್ಲಿ ಗಂಡು ಹೆಣ್ಣುಗಳು ತಮ್ಮ ಬಾಳ ಸಂಗಾತಿಯನ್ನು ತಾವೇ ಆಯ್ಕೆ ಮಾಡಿಕೊಳ್ಳುತ್ತವೆ. ಸಾಮಾನ್ಯವಾಗಿ ಈ ಬಗೆಯ ಆಯ್ಕೆ ಪ್ರೀತಿಯಿಂದುಂಟಾಗುವ ಮಧುರ ಕ್ರಿಯೆ. ಮದುವೆಯಾದ ಮೇಲೇ ಈ ಪ್ರೀತಿ ಬಂಧ ಜೀವನಪರ್ಯಂತ ಇರುತ್ತದೆಯೆಂದು ಹೇಳಲಾಗುವುದಿಲ್ಲ. ಪ್ರೀತಿ ಉಂಟಾಗುವ ಸಮಯದಲ್ಲಿ ವಯೋಸಹಜವಾದ ದೈಹಿಕ ಸೆಳೆತ, ಬಾಹ್ಯ ಆಕೃತಿಯ ಮೋಹ, ನಿಸರ್ಗದತ್ತವಾದ ಕಾಮವಾಂಛೆ– ಪ್ರಬಲವಾಗಿ ಕೆಲಸ ಮಾಡುತ್ತವೆ. ಒಂದು ಸೂರಿನಲ್ಲಿ ಬದುಕು ಆರಂಭಿಸಿದ ಮೇಲೆ ಸಂಗಾತಿಗಳ ಅಂತರಂಗ ಪ್ರಪಂಚ ಪದರ ಪದರವಾಗಿ ಅನಾವರಣವಾಗತೊಡಗುತ್ತದೆ. ಆಗ ಏಕ ಕಾಲದಲ್ಲಿ ಆಶ್ಚರ್ಯವೂ ಬೆರಗೂ ಕೋಪವೂ ಅಸಹ್ಯವೂ ಮೂಡಬಹುದು. ತಾವು ಕಾಣದ ಅಪರಿಚಿತ ವ್ಯಕ್ತಿತ್ವದ ವ್ಯಕ್ತಿಯೊಡನೆ ಬದುಕುವುದಕ್ಕಿಂತ ಬೇರೆಯಾಗುವುದು ಸರಿಯೆನ್ನಿಸಿ ಕಾನೂನಾತ್ಮಕವಾಗಿ ದೂರ ಸರಿಯುತ್ತಾರೆ.

ಎಲ್ಲ ಪ್ರೇಮ ಮದುವೆಗಳೂ ಹೀಗೇ ಇರುತ್ತವೆಯೆಂದು ಹೇಳಲಾಗುವುದಿಲ್ಲ. ಪ್ರೀತಿಸಿ ಮದುವೆಯಾಗಿ ಉಸಿರಿರುವವರೆಗೂ ಸಂಸಾರ ಮಾಡಿದವರು ಅಸಂಖ್ಯಾತ.

ಆದರೆ, ಭಾರತದಲ್ಲಿ ಇಂದಿಗೂ ಪ್ರೇಮವಿವಾಹಗಳು ಕಡಿಮೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಪ್ರತಿಶತ ಐದಕ್ಕಿಂತ ಕಡಿಮೆ. ಅಂದ ಮೇಲೆ ನಮ್ಮ ಸಮಾಜದಲ್ಲಿ ಹಿರಿಯರು ನೋಡಿ ಒಪ್ಪಿದ– ಆ ಕ್ಷಣದಲ್ಲಿ ತಾವೂ ನೋಡಿ ಒಪ್ಪಿದ– ಸಂಗಾತಿಯನ್ನೇ ಮದುವೆಯಾಗಿ ಜೀವನಪೂರ್ಣ ಬದುಕು ಸಾಗಿಸುವವರೇ ಅಧಿಕ ಎಂದಾಯ್ತು. ಸಂಗಾತಿ ಒಳ್ಳೆಯವ(ಳು)ನಿರಲಿ, ಕೆಟ್ಟವನಿ(ಳಿ)ರಲಿ ಅನುಸರಿಸಿಕೊಂಡು ಹೋಗುವ ಜಾಯಮಾನ ಭಾರತೀಯರದು.

ಈ ಹೊಂದಾಣಿಕೆಯ ಬದುಕಿಗೆ ಭಾರತೀಯ ವಧು– ವರರು ಮದುವೆಗೆ ಮುಂಚಿತವಾಗಿಯೇ ಮಾನಸಿಕವಾಗಿ ಸಿದ್ಧರಿರುತ್ತಾರೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯು ಸುಗುಣವಂತೆ, ಹೇಳಿಕೊಂಡು ಹೋಗುವ, ಮಕ್ಕಳನ್ನು ಹೆತ್ತು ಬೆಳೆಸುವ ಮತ್ತು ಪ್ರಶ್ನಿಸದ ಹೆಂಡತಿ ಸಿಗುವುದು 'ಭುವನದ ಭಾಗ್ಯ'ವೆಂದು ಪರಿಗಣಿಸಿತು; ನರಕ ಸದೃಶ ಗಂಡನ ಮನೆ ಸಿಕ್ಕರೆ ಅದು ತನ್ನ ಪೂರ್ವಜನ್ಮದ ಕರ್ಮವೆಂದು ಸ್ತ್ರೀ ಭಾವಿಸುವಂತೆ ಅವಳನ್ನು ಮಾನಸಿಕವಾಗಿ ಸಿದ್ಧಗೊಳಿಸಿತು.

ಸಂಸಾರವೆಂಬುದು ಎರಡು ಮೈಮನಸುಗಳ ಸಹಭಾಗಿತ್ವ. ಇದರಲ್ಲಿ ತಾಳ ತಪ್ಪಿದಾಗ ಅಸಹನೆ, ಕೋಪ ಸಹಜ. ಆಗ ಒಬ್ಬರ ಮೇಲೊಬ್ಬರು ಕಾಲು ಕೆರೆದು ಜಗಳವಾಡುವುದು, ಮನೆವಾರ್ತೆಯನ್ನು ಬೀದಿರಂಪ ಮಾಡುವುದು ಪ್ರಾರಂಭವಾಗುತ್ತದೆ. ಈ ರಂಪ ಕಿರಿದಾಗಿ, ಹಿರಿತೊರೆಯಾಗಿ ಬೆಳೆದು ಮಕ್ಕಳ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಬೆಳೆಯುವ ಮನಸ್ಸಿನ ಮೇಲೆ ವಿವಾಹ ವ್ಯವಸ್ಥೆಯ ಬಗ್ಗೆ ತುಚ್ಛಭಾವ ಮೂಡುವ ಸಾಧ್ಯತೆಯಿರುತ್ತದೆ. ಇಂಥ ಸಂದರ್ಭದಲ್ಲೇ ಪ್ರೀತಿ– ವಿವೇಕಗಳು ಮೂಡಬೇಕು. ಪ್ರತಿ ಮಾತು– ನಡತೆಯಲ್ಲಿ ತಾಳ್ಮೆ ಆಲೋಚನೆಗಳು ಉಸಿರಾಡಬೇಕು.

ಇಲ್ಲಿ ತಾಳ್ಮೆ ಅಸಹಾಯಕತೆಯಲ್ಲ; ಅದು ಸಂಗಾತಿಯನ್ನು ಅರ್ಥಮಾಡಿಕೊಳ್ಳುವ ಸಾಧನ.

ಭಾರತೀಯ ಸಮಾಜದಲ್ಲಿ ಜಾತಿ ಜಾತಿಗಳ ನಡುವೆ ಅಥವಾ ಒಂದೇ ಧರ್ಮದ ಭಿನ್ನ ಕುಟುಂಬಗಳ ನಡುವೆ ವಿವಾಹ ಸಂಬಂಧಗಳು ಏರ್ಪಟ್ಟರೂ ಬೆಳೆದ ಪರಿಸರ ಕಾರಣದಿಂದಾಗಿ ಭಿನ್ನ ಭಿನ್ನ ಅಭಿರುಚಿಗಳು ಮೂಡಿರುತ್ತವೆ. ಬದುಕನ್ನು ನೋಡುವ ದೃಷ್ಟಿ, ಆಹಾರ ಸಂಸ್ಕೃತಿ, ರುಚಿ ಸಂಸ್ಕೃತಿ ಮತ್ತು ವಸ್ತ್ರ ಸಂಸ್ಕೃತಿಗಳು ವ್ಯಕ್ತಿಗಳನ್ನು ಕುಟುಂಬದಿಂದ ಕುಟುಂಬಕ್ಕೆ ಬೇರೆ ಬೇರೆಯಾಗಿ ಬೆಳೆಸಿರುತ್ತವೆ. ಹೀಗೆ ಎರಡು ಭಿನ್ನ ಸಂಸ್ಕೃತಿಯಲ್ಲಿ ಬೆಳೆದ ಗಂಡು– ಹೆಣ್ಣುಗಳು ಬಾಳ ಸಂಗಾತಿಗಳಾದಾಗ ದೈಹಿಕ ಆಕರ್ಷಣೆಯೊಂದರ ಹೊರತಾಗಿ ಮಿಕ್ಕೆಲ್ಲ ಅಂಶಗಳು ಭಿನ್ನವಾಗಿ ದರ್ಶನವಾಗಿ, ಅಪರಿಚಿತವೆನ್ನಿಸಿ ಅಂತರ ಸೃಷ್ಟಿಯಾಗುತ್ತದೆ. ತನಗೆ ಇಷ್ಟವಿಲ್ಲದ ಅಥವಾ ಒಗ್ಗದ ಅಂಶಗಳ ಕಾರಣದಿಂದಾಗಿ ಅಸಹನೆ ಮೂಡುತ್ತದೆ; ದಾಂಪತ್ಯದಲ್ಲಿ ರಂಪ ಮೂಡುತ್ತದೆ.

ಆಗ ಸಂಗಾತಿಗಳಲ್ಲಿ ಸಹನೆ–ವಿವೇಕಗಳು ಕೆಲಸ ಮಾಡತೊಡಗಿದರೆ ಪರಿಸರ ಅರಿಯುವ–, ಕಲಿಯುವ ಕ್ರಿಯೆ ಪ್ರಾರಂಭವಾಗುತ್ತದೆ. ಇಬ್ಬರು ಭಿನ್ನ ಮನಸ್ಸಿನ ಅಸಹನೆಯ ನಡುವೆ ಸೃಷ್ಟಿಯಾಗುವ ಜಗಳ ಬದುಕಿನ ಕಲಿಕೆಯ ಮಾಧ್ಯಮವಾಗಿರಬೇಕು. ಆಗ ಬಿಟ್ಟು ಪಡೆದುಕೊಳ್ಳುವ ಕ್ರಿಯೆ ಆರಂಭ.

ಅದನ್ನೇ ನಮ್ಮ ಜನಪದರು 'ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಾಂಗ'ವೆಂದು ಗುರುತಿಸಿದರು. ಗಂಡ ಹೆಂಡಿರ ಜಗಳ ಮೈ ಮುನಿಸುಗಳು ಅರ್ಥ ಮಾಡಿಕೊಳ್ಳುವ ಕ್ರಿಯೆಯ ಮಧುರ ಹೂವುಗಳಾಗಿ ಅರಳಬೇಕು. ಅದನ್ನೇ ಕವಿ ಬೇಂದ್ರೆ 'ಒಲವು' ಎಂದು ಸುಗಂಧಿಸಿದರು. ಬದುಕಿಗೆ ಒಂದು ಹೊಸ ಅರ್ಥ, ರಂಗು ಬರಬೇಕಾದರೆ 'ಸಮರಸವೇ ಜೀವನ'ವಾಗಬೇಕು ಎಂದು ಹೇಳಿರುವ ಅರ್ಥವೈಶಾಲ್ಯವೂ ಅದೇ ಆಗಿದೆ. ಬದುಕು ನವರಸಗಳ ವಿವೇಕಯುತ ಬಂಧುರವಾದಾಗ ಅಂತ್ಯದಲ್ಲಿ 'ಶಾಂತರಸ' ಮೂಡುತ್ತದೆ.

ಪ್ರತಿಯೊಂದು ವಿವಾಹದ ಅಂತಿಮ ಆಸೆ ಶಾಂತ ರಸಾನುಭೂತಿಯೇ ಆಗಬೇಕು. ಸಂಸಾರವೆಂಬುದು ನಿರಂತರ ಅರಿವಿನ ಕಲಿಕೆಯಾದಾಗ ಮಾತ್ರ ಅದು ಸಾಧ್ಯ.

■ **ಶಿಕಾಕು**

## ಮಾತೇ ಮುತ್ತು

★ ಪ್ರಾಮಾಣಿಕ ಭಿನ್ನಮತ ಎಷ್ಟೋ ಸಲ ಪ್ರಗತಿಯ ಆರೋಗ್ಯಕರ ಸೂಚನೆಯಾಗಿರುತ್ತದೆ.
-ಮಹಾತ್ಮ ಗಾಂಧಿ

★ ಪ್ರಕೃತಿ ನಿಷ್ಪ್ರಯೋಜಕವಾದ ಯಾವುದನ್ನೂ ಸೃಷ್ಟಿಸಿಲ್ಲ.
–ಅರಿಸ್ಟಾಟಲ್

★ ನಿಮ್ಮನ್ನು ನೀವು ನಂಬಲಿಲ್ಲ ಎಂದಾದರೆ ದೇವರನ್ನು ನಂಬಿ ಪ್ರಯೋಜನವಿಲ್ಲ.
–ಸ್ವಾಮಿ ವಿವೇಕಾನಂದ

★ ಪ್ರೇಮವೆಂಬ ರೋಗ ಬುದ್ಧಿವಂತ ಮತ್ತು ದಡ್ಡ ಎಂದು ತಾರತಮ್ಯ ಮಾಡುವುದಿಲ್ಲ.
–ಆಲ್ಬರ್ಟ್ ಕಾಮೂ

★ ಭವಿಷ್ಯದ ಬಗ್ಗೆ ನಾನು ಚಿಂತಿಸುವುದಿಲ್ಲ. ಏಕೆಂದರೆ ಅದು ಬಂದೇ ಬರುತ್ತದೆ.
–ಆಲ್ಬರ್ಟ್ ಐನ್‌ಸ್ಟೀನ್

★ ಜ್ಞಾನದಲ್ಲಿ ಹೂಡಿಕೆ ಮಾಡಿದರೆ ಎಂದೆಂದಿಗೂ ಅತ್ಯಧಿಕ ಆದಾಯ ಸಿಗುತ್ತದೆ.
–ಬೆಂಜಮಿನ್ ಫ್ರಾಂಕ್ಲಿನ್

★ ನಮಗೆ ಎಷ್ಟು ಯೋಗ್ಯತೆ ಇದೆಯೋ ಅಷ್ಟೇ ಉತ್ತಮ ಆಡಳಿತ ಲಭ್ಯವಾಗಿಸುವುದು ಪ್ರಜಾಸತ್ತೆಯ ವಿಶೇಷ.
–ಜಾರ್ಜ್ ಬರ್ನಾರ್ಡ್ ಷಾ

★ ಕೇಳಿದಾಗ ಕೊಟ್ಟುಬಿಡುವುದು ಒಳ್ಳೆಯದು. ಆದರೆ ಕೇಳದೇ ಕೊಡುವುದು ಇನ್ನೂ ಒಳ್ಳೆಯದು.
–ಖಲೀಲ್ ಗಿಬ್ರಾನ್

★ ಶ್ರೇಷ್ಠ ಸತ್ಯಗಳು ಗೊತ್ತಿಲ್ಲದಾಗ ಗ್ರಂಥಗಳ ಓದಿನಿಂದ ಪ್ರಯೋಜನವಿಲ್ಲ. ಶ್ರೇಷ್ಠ ಸತ್ಯಗಳು ಗೊತ್ತಾದಾಗಲೂ ಗ್ರಂಥಗಳ ಓದಿನಿಂದ ಪ್ರಯೋಜನವಿಲ್ಲ.
–ಆದಿ ಶಂಕರ

★ ಪ್ರೇಮದಲ್ಲಿ ಯಾವತ್ತೂ ಸ್ವಲ್ಪ ಹುಚ್ಚಿರುತ್ತವೆ. ಆದರೆ ಎಷ್ಟೋ ಸಲ ಆ ಹುಚ್ಚು ಸಕಾರಣವಾಗಿರುತ್ತದೆ.
–ಫ್ರೆಡ್ರಿಕ್ ನೀಷೆ

★ ಜಗತ್ತಿನಲ್ಲಿ ಅರ್ಧದಷ್ಟು ಜನರು ಇನ್ನೊಬ್ಬರ ಸಂತೋಷವನ್ನು ಅರ್ಥ ಮಾಡಿಕೊಳ್ಳಲಾರರು.
–ಜೇನ್ ಆಸ್ಟಿನ್

★ ಅಜ್ಞಾನವು ಯಾವತ್ತೂ ಯಾವ ಪ್ರಶ್ನೆಗಳನ್ನೂ ಬಗೆಹರಿಸುವುದಿಲ್ಲ.
–ಬೆಂಜಮಿನ್ ಡಿಸ್ರೇಲಿ

★ ನಮ್ಮನ್ನು ಯಾರೂ ಮೋಸಗೊಳಿಸಲು ಸಾಧ್ಯವಿಲ್ಲ. ನಾವೇ ಮೋಸ ಹೋಗುತ್ತೇವೆ.
–ಗಾಯಥೆ

★ ಬುದ್ಧಿವಂತ ತನ್ನ ಸವಂತ ನಿರ್ದೇಶನಗಳನ್ನು ಮಾತ್ರ ಪಾಲಿಸುತ್ತಾನೆ.
–ಯೂರಿಪಿಡಿಸ್